## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಸಿ8(3) ಶಾಶಿಅ ಸುತ್ತೋಲೆ 1/2004-05 ದಿನಾಂಕ : 23.7.2004

## ಸುತ್ತೋಲೆ

ವಿಷಯ : ಶಾಲೆಗಳಲ್ಲಿ ಕಟ್ಟಡಗಳು ಹಾಗೂ ಶಾಲಾ ವಠಾರ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಸುರಕ್ಷಿತವಾಗಿರುವುದನ್ನು ಸಂದರ್ಶನಾಧಿಕಾರಿಗಳು ಪರಿಶೀಲಿಸಿ ವರದಿ ನೀಡುವ ಬಗ್ಗೆ.

ಉಲ್ಲೇಖ : ಶಿಕ್ಷಣ ಕಾಯ್ದೆಯ ಸೆಕ್ಷನ್ 30 ಮತ್ತು 31ರ ನಿಯಮ
2) ವರ್ಗೀಕರಣ 2 ನೋಂದಾವಣೆ ನಿಯಮ ಅಧಿಸೂಚನೆ ಸಂಖ್ಯೆ: ಇಡಿ 116 ವಿವಿಧ 95 (ಎ) ದಿನಾಂಕ 17.3.97

ಶಾಲೆಗಳ ಕಟ್ಟಡಗಳು ಮತ್ತು ವಠಾರ ಅದರಲ್ಲಿ ವ್ಯಾಸಾಂಗ ಮಾಡುವ ವಿದ್ಯಾರ್ಥಿಗಳು ಮತ್ತು ಬೋಧಿಸುವ ಶಿಕ್ಷಕರಿಗೆ ಎಲ್ಲಾ ವಿಧಗಳಲ್ಲಿ ಸುರಕ್ಷಿತವಾಗಿರಬೇಕೆನ್ನುವುದು ಸರ್ವ ಮಾನ್ಯ ಅಂಶವಾಗಿರುತ್ತದೆ.

ಕರ್ನಾಟಕ ಶಿಕ್ಷಣ ಕಾಯ್ದೆಯ ನಿಯಮದಡಿಯಲ್ಲಿ ರಚಿಸಲಾದ ವರ್ಗೀಕರಣ ಮತ್ತು ನೋಂದಾವಣೆ ನಿಯಮ 1997 ರ ನಿಯಮ 4, 5 ಮತ್ತು 6ರಲ್ಲಿ ತಿಳಿಸಿರುವಂತೆ ಶಾಲಾ ಕಟ್ಟಡವೂ ಸುಸಜ್ಜಿತವಾಗಿರಬೇಕೆಂದು ಹೇಳಿರುವುದರಲ್ಲಿ ಸುರಕ್ಷಿತವಾಗಿರಬೇಕೆಂಬ ಆಶಯವೂ ಒಳಗೊಂಡಿರುತ್ತದೆ. ಆದರೆ ಈ ಅಂಶವು ಅನೇಕ ವೇಳೆ ಶಾಲೆಗಳನ್ನು ಸಂದರ್ಶಿಸುವ ಅಧಿಕಾರಿಗಳ ಗಂಭೀರ ಪರಿಗಣನೆಗೆ ಬಾರದೆ, ಅನಾಹುತಗಳು ಸಂಭವಿಸಿದಾಗ ಮಾತ್ರ ಇದನ್ನು ಗಂಭೀರವಾಗಿ ಪರಿಗಣಿಸುವ ತಾತ್ಕಾಲಿಕ ಮೇಲ್ವಿಚಾರಣಾ ಮನೋಭಾವವನ್ನು ಗಮನಿಸಲಾಗಿದೆ. ಇದನ್ನು ತಕ್ಷಣ ಬದಲಿಸಿ, ಶಾಲಾ ಕಟ್ಟಡ ಮತ್ತು ಆವರಣದ ಸುರಕ್ಷಾರ್ಹತೆಯನ್ನು ಸಂದರ್ಶನದ ವೇಳೆ ನಿರಂತರವಾಗಿ ಮತ್ತು ಕಡ್ಡಾಯವಾಗಿ ಪರಿಶೀಲಿಸುವ ಅಗತ್ಯವಿದೆಯೆಂದು ಅಭಿಪ್ರಾಯ ಪಡಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರು, ಉಪನಿರ್ದೇಶಕರು ಮತ್ತು ಇತರ ಎಲ್ಲಾ ಅಧೀನ ಅಧಿಕಾರಿಗಳು ಶಾಲಾ ಸಂದರ್ಶನ ಮತ್ತು ತಪಾಸಣೆ ಜರುಗಿಸುವಾಗ ಶಾಲೆಗಳ ಮತ್ತು ಶಾಲಾ ಆವರಣದ ಸುರಕ್ಷತೆಯ ಬಗ್ಗೆ ಪರಿಶೀಲಿಸಿ, ತಮ್ಮ ವರದಿಗಳಲ್ಲಿ ದಾಖಲಿಸಲು ತಿಳಿಸಿದೆ. ಜೊತೆಗೆ, ಶಾಲೆಗಳ ಮತ್ತು ಆವರಣದ ಸುರಕ್ಷತಾ ಮಟ್ಟ ಸರಿಯಿಲ್ಲವಾದಲ್ಲಿ ಶಾಲಾ ಮುಖ್ಯಸ್ಥರಿಗೆ ಮತ್ತು ಆಡಳಿತವರ್ಗದವರಿಗೆ ಅದನ್ನು ಸರಿಪಡಿಸಿಕೊಳ್ಳಲು ಸ್ಥಳದಲ್ಲೇ ತಿಳಿಸಲು ಸೂಚಿಸಿದೆ. ಹೊಸ ಶಾಲೆಗಳ ನೋಂದಣಿ

ಅನುಮತಿಗೆ ಪ್ರಸ್ತಾವನೆಯನ್ನು ಕಳುಹಿಸುವಾಗ, ಹಾಸ್ಟೆಲ್‌ಗಳಿಗೆ ಅನುದಾನಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸುವ ಸಂದರ್ಭದಲ್ಲಿ ಮತ್ತು ಮಾನ್ಯತೆ ನವೀಕರಣದ ಸಮಯ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳು / ಅಧೀನ ಅಧಿಕಾರಿಗಳು ಇವರಲ್ಲಿ ಪ್ರಸ್ತಾವನೆ ಸಲ್ಲಿಸಲು / ವರದಿ ನೀಡಲು ಯಾರು ಸಂಬಂಧ ಪಡುವರೋ ಅವರು ಈ ಕೆಳಗಿನಂತೆ ಸುರಕ್ಷತಾ ವರದಿಯನ್ನು ತಪ್ಪದೆ ಅಡಕಗೊಳಿಸಲು ತಿಳಿಸಿದೆ.

(ಸಹಿ)

ನಿರ್ದೇಶಕರು (ಪ್ರೌಢ ಶಿಕ್ಷಣ)

This document was created with Win2PDF available at http://www.daneprairie.com.
The unregistered version of Win2PDF is for evaluation or non-commercial use only.